# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹಳಿಯಾಳ.

## ಸಿ.ಸಿ.ನಂಬರ. 234/2019.

ಫಿರ್ಯಾದಿ : ಕರ್ನಾಟಕ ಸರಕಾರ
ಹಳಿಯಾಳ ಪೋಲಿಸ ಠಾಣೆ, ಹಳಿಯಾಳ.

ವಿರುದ್ಧ

ಆರೋಪಿತರು : 1. ಅಗ್ನೇಲ್ ತಂದೆ ಲೂಯಿಸ್ ಸಿದ್ದಿ,
ವಯಸ್ಸು : 19 ವರ್ಷ, ವೃತ್ತಿ : ಕೂಲಿ ಕೆಲಸ,
ವಾಸಸ್ಥಳ : ಪನಸಾಲಿ , ತಾ : ಜೊಯಿಡಾ,
ಜಿಲ್ಲೆ : ಉತ್ತರ ಕನ್ನಡ.

2. ಮೈಕಲ್ ತಂದೆ ಅಪ್ಪು ಕಕ್ಕೇರಿ,
ವಯಸ್ಸು : 24 ವರ್ಷ, ವೃತ್ತಿ : ಚಾಲಕ ಕೆಲಸ,
ವಾಸಸ್ಥಳ : ಗಾಂಧಿ ನಗರ, ದಾಂಡೇಲಿ, ತಾ : ದಾಂಡೇಲಿ,
ಜಿಲ್ಲೆ : ಉತ್ತರ ಕನ್ನಡ.

3. ಮೇಲ್ವಿನ್ ತಂದೆ ಮೋಜಿಸ್ ಫರ್ನಾಂಡಿಸ್,
ವಯಸ್ಸು : 24 ವರ್ಷ, ವೃತ್ತಿ : ಚಾಲಕ ಕೆಲಸ,
ವಾಸಸ್ಥಳ : ಗಾಂಧಿ ನಗರ, ದಾಂಡೇಲಿ, ತಾ : ದಾಂಡೇಲಿ,
ಜಿಲ್ಲೆ : ಉತ್ತರ ಕನ್ನಡ.

## ದೋಷಾರೋಪಣೆ

ನಾನು ದೇಶಭೂಷಣ ಕೌಜಲಗಿ, ಬಿ.ಎ.ಎಲ್.ಎಲ್.ಬಿ., ಪ್ರ.ದ.ನ್ಯಾದಂ. ಹಳಿಯಾಳ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೊಷಾರೋಪಣೆ ಏನೆಂದರೆ,

ದಿನಾಂಕ 02-01-2019 ರಂದು ಮಧ್ಯಾಹ್ನ 02-00 ರ ಸಮಯದಲ್ಲಿ ಹಳಿಯಾಳ ಪೋಲಿಸ ಠಾಣಾ ಸರಹದ್ದಿನ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವ ಹಳಿಯಾಳ ತಾಲ್ಲೂಕಿನ ಅಡ್ಡಿಗೇರಾ ಗ್ರಾಮದ

ಕ್ರಾಸ್ ಹತ್ತಿರ ಪಿರ್ಯಾದಿಯು ತನ್ನ ಬುಲೇಟ್ ವಾಹನದಲ್ಲಿ ಹೋಗುತ್ತಿದ್ದಾಗ ಎದುರಗಡೆಯಿಂದ ಟಿವಿಎಸ್ ಸ್ಟಾರ್ಟ ಮೋಟಾರ್ ಸೈಕಲ್ ಚಲಾಯಿಸಿಕೊಂಡು 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಬಂದು ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಮೋಟಾರ್ ಸೈಕಲ್ ಮಧ್ಯಕುಳಿತು ನಿನ್ನ ಕೈಯಲ್ಲಿದ್ದ ಜಾಳಿಗೆಯನ್ನು ಬೀಸುತ್ತಾ ವಾಹನದಲ್ಲಿ ಹೊರಟಿದ್ದಾಗ ಪಿರ್ಯಾದಿಯ ಬಲಗೈ ಮಧ್ಯ ಬೆರಳಿಗೆ ತಾಗಿ ಗಾಯವಾಗಿದರಿಂದ ಅದನ್ನು ಪಿರ್ಯಾದಿಯು ಪ್ರಶ್ನೆ ಮಾಡಿದ್ದಕ್ಕೆ 1 ರಿಂದ 3 ನೇ ಆರೋಪಿತರಾದ ನೀವು ಪಿರ್ಯಾದಿಗೆ ಬೋಸಡಿ ಮಗನೆ ಕೇಳಲು ನೀನು ಯಾರು ಎಂದು ಹೇಳಿ ಅಡಗಟ್ಟಿ ಅವರು ಹಕ್ಕುಳ್ಳ ದಿಕ್ಕಿನ ಕಡೆಗೆ ಸಾಗಲು ಅವಕಾಶ ಮಾಡಿಕೊಡದೇ ನಿಗ್ರಹಿಸುವ ಮೂಲಕ ನೀವು ಭಾ.ದಂ.ಸಂ.ಕಲಂ.341 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಎರಡನೇಯದಾಗಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಪಿರ್ಯಾದಿಯೊಂದಿಗೆ ಜಗಳ ತೆಗೆದು ಸ್ವಇಚ್ಛೆಯಿಂದ ಕೈಯಿಂದ ಮೈಮೇಲೆ ಹೊಡೆದು ಹಾಗೂ ಜಗಳ ಬಿಡಿಸಲು ಬಂದ ಚಾಸಾ 2 ರವರನ್ನು ಗಟಾರದಲ್ಲಿ ಬೀಳಿಸಿ ಸಾಧಾರಣ ಸ್ವರೂಪದ ಗಾಯಪಡಿಸುವ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 34 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ಮೂರನೇಯದಾಗಿ ಈ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಿಮ್ಮ ಪೈಕಿ 1 ಮತ್ತು 3 ನೇ ಆರೋಪಿಯಾದ ನೀವು ಸಮಾನ ಉದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಪಿರ್ಯಾದಿಗೆ ಸ್ವಇಚ್ಛೆಯಿಂದ ಕಟ್ಟಿಗೆ ಬಡಿಗೆಯಿಂದ ತೊಡೆ ಮೇಲೆ, ಬಲಗೈ ರಟ್ಟೆ ಮೇಲೆ, ಹೊಟ್ಟೆಯ ಮೇಲೆ ಹಾಗೂ ತಲೆಯ ಮೇಲೆ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಂಟುಮಾಡುವ ಮೂಲಕ ಭಾ.ದಂ.ಸಂ.ಕಲಂ.324 ರ ಸಹವಾಚಕ ಕಲಂ 34 ರ ಅಡಿಯುಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ .

ನಾಲ್ಕನೇಯದಾಗಿ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಂಗನಮತ ಮಾಡಿಕೊಂಡು ಪಿರ್ಯಾದಿಯನ್ನು ಉದ್ದೇಶಿಸಿ "ಬೋಸಡಿ ಮಗನೆ" ಎಂದು ಅವಾಚ ಶಬ್ದಗಳಿಂದ ಅವರ ಶಾಂತಿಗೆ ಭಂಗ ಉಂಟು ಮಾಡಿ ಅವರಿಗೆ ಅವಮಾನ ಆಗುವಂತೆ ನಿಂದಿಸುವ ಮೂಲಕ ಭಾ.ದಂ.ಸಂ ಕಲಂ 504 ಸಹವಾಚಕ ಕಲಂ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಂಗನಮತ ಮಾಡಿಕೊಂಡು "ಇನ್ನೊಮ್ಮೆ ನೀನು ಒಬ್ಬನೇ ಸಿಕ್ಕಾಗ ನಿನಗೆ ಮುಗಿಸಿಬಿಡುತ್ತೇವೆ" ಎಂದು ಜೀವ ಬೇದರಿಕೆ ಹಾಕುವ ಮೂಲಕ ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

**ಆರೋಪಿ ಕ್ರ.1**

ಪ್ರಶ್ನೆ 1: ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು.

**ಆರೋಪಿ ಕ್ರ.2**

ಪ್ರಶ್ನೆ 1: ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು.

**ಆರೋಪಿ ಕ್ರ.3**

ಪ್ರಶ್ನೆ 1: ಸದ್ರಿ ದೋಷಾರೋಪಣೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ: ತಿಳಿಯಿತು.

ಪ್ರಶ್ನೆ 2: ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ : ವಿಚಾರಣೆಯಾಗಬೇಕು.

(ದೊಷಾರೋಪಣೆಯ ಸಾರಾಂಶವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಸ್ಥಳ : ಹಳಿಯಾಳ.

ದಿನಾಂಕ : 10-01-2024. ಪ್ರ.ದ.ನ್ಯಾದಂ., ಹಳಿಯಾಳ.